ಇದನ್ನು ವಾಪಸ್ಸು ಪಡೆದು ಮೂಲ ಮಸೂದೆ ಏನು ಇತ್ತೋ, ಅದನ್ನು ತರತಕ್ಕ ಧೈರ್ಯವನ್ನು ಮಾಡಲಿ. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಇರಬೇಕಾಗುತ್ತದೆ.

ಅಧ್ಯಕ್ಷರು : ಬೆಳಿಗ್ಗೇನೆ ಮಾನ್ಯ ಸಚಿವರು ಹೇಳಿದರು, ನಿಮ್ಮ ಸಲಹೆಗಳೆಲ್ಲವನ್ನೂ ಪರಿಶೀಲಿಸುತ್ತೇನೆ ಎಂದು ; ಇದೂ ಒಂದು ಪರಿಶೀಲನಾರ್ಹವಾದ ಸಲಹೆ.

ವಿಧಾನ ಮಂಡಲ ಕಾರ್ಯಾಲಯದ ಅಧಿಕಾರಿ ಒಬ್ಬರನ್ನು ಅಮಾನತ್ತಿನಲ್ಲಿಟ್ಟಿರತಕ್ಕ ವಿಷಯದ ಬಗ್ಗೆ ಪ್ರಸ್ತಾಪ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೇ, ತಮಗೆ ಒಂದು ಪತ್ರವನ್ನು ಈ ದಿನ ಬರೆದಿದ್ದೇನೆ. ಆ ಪತ್ರದಲ್ಲಿ ವಿಧಾನಮಂಡಲದ ಕಾರ್ಯಲಯದ ಒಬ್ಬ ಅಧಿಕಾರಿಯನ್ನು ತಾವು ಅಮಾನತ್ತಿನಲ್ಲಿ ಇಟ್ಟಿರತಕ್ಕ ವಿಷಯದ ಬಗ್ಗೆ ಆದು ತಮಗೆ ಸಂಬಂಧಪಟ್ಟ ಒಂದು ವಿಷಯ ಆಗಿದ್ದರೂ ಸಹಾ, ತಮ್ಮಲ್ಲಿ ನಾನು ಒಂದು ವಿನಂತಿ ಮಾಡಿಕೊಳ್ಳಲು ಇಷ್ಟಪಡುತ್ತೇನೆ. ಏನೆಂದರೆ, ಆ ದಿವಸ ನಮ್ಮ ಬಿಸನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ನಡೆಯುವ ಸಂದರ್ಭದಲ್ಲಿ ಒಂದು ಗಮನ ಸೆಳೆಯುವ ವಿಚಾರದಲ್ಲಿ ಈ ಸರ್ಕಾರದ ಗಮನ ಸೆಳೆಯುವುದಕ್ಕೆಂದು ಹೇಳಿ ಮಾನ್ಯ ಸದಸ್ಯರೊಬ್ಬರ ಸಹಿಯನ್ನು ಹಾಕುವುದಕ್ಕೆ ನಾನು ಅವರಿಗೆ ವಿನಂತಿ ಮಾಡಿಕೊಂಡಿರತಕ್ಕದ್ದು. ಅವರು ನನ್ನ ಹೇಳಿಕೆ ಆಧಾರದ ಮೇಲೆ ಆ ರೀತಿ ಮಾಡಿದ್ದಾರೆ ಮತ್ತು ಇದರಲ್ಲಿ ತಪ್ಪು ನನ್ನದಾಗಿದೆಯೇ ಹೊರತು ಅವರದ್ದಲ್ಲ, ಇದರಲ್ಲಿ ತಪ್ಪು ನನ್ನದಾಗಿದೆ ಮತ್ತು ಅವರ ಜವಾಬ್ದಾರಿಯನ್ನು ನಾನು ಹೊರಬೇಕಾಗಿದ್ದು ನಿಜ. ಇದರಿಂದ ಅನಗತ್ಯವಾಗಿ ಒಬ್ಬ ಅಧಿಕಾರಿಯನ್ನು ನಾನು ದೂಷಣೆ ಮಾಡುವುದಕ್ಕೆ ತಯಾರಿಲ್ಲ. ತಾವು ಇದರ ಬಗ್ಗೆ ಈಗಾಗಲೇ ವಿಚಾರಣೆ ಮಾಡಿದ್ದೀರಿ; ಆದ್ದರಿಂದ ತಾವು ತಮ್ಮ ಆಜ್ಞೆಯನ್ನು ಮರುಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಅದನ್ನು ಮರು ಪರಿಶೀಲನೆ ಮಾಡುತ್ತೇನೆ. ಈಗ ಮಾನ್ಯ ಮಂತ್ರಿಗಳು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ಒಂದು ಹೇಳಿಕೆ ಮಾಡುತ್ತಾರೆ.

ಮಂತ್ರಿಯಿಂದ ಹೇಳಿಕೆ

ವಿದ್ಯುತ್ ಸರಬರಾಜಿನ ಬಗ್ಗೆ

+ಶ್ರೀ ಎಂ. ವೀರಪ್ಪ ಮೊಯಿಲಿ (ಸಂಸದೀಯ ವ್ಯವಹಾರ ಮತ್ತು ಶಿಕ್ಷಣ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚಿನ ದಿನಗಳಲ್ಲಿ ದಿನಬಳಕೆಯ ವಿದ್ಯುಚ್ಛಕ್ತಿ ಹೆಚ್ಚಾಗಿರುವುದರಿಂದ ಕ್ರಮವಾದ ರೀತಿಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಕಷ್ಟವಾಗುತ್ತದೆ. ಪ್ರತಿದಿನ 45.16 ಮಿಲಿಯನ್ ಯೂನಿಟ್‌ಗಳು ಮುಂದಿನ ಮಳೆಗಾಲದವರೆಗೆ ಲಭ್ಯವಿರುತ್ತದೆ ಹಾಗೂ ಪೀಕ್ ಲೋಡ್ 2,300 ಮೆಗಾವಾಟ್ಸ್‌ವರೆಗೂ ಸಾಧ್ಯ. ಲಭ್ಯವಿರುವ 45.16 ಮಿಲಿಯನ್ ಯೂನಿಟ್ಸ್‌ಗಿಂತ ಬೇಡಿಕೆ ಮತ್ತು ಪೀಕ್ ಲೋಡ್ 2300 ಮೆ.ವಾಟ್ಸ್‌ಗಿಂತಾ ಹೆಚ್ಚಾದರೆ ಟ್ರಾನ್ಸ್‌ಮಿಷನ್ ಲೈನ್ ಮತ್ತು ಜನರೇಟರ್‌ಗಳು ಕುಸಿದುಬೀಳುವ ಸಾಧ್ಯತೆ ಇರುತ್ತದೆ. ಡಿಸೆಂಬರ್ ತಿಂಗಳ ಕೊನೆ ದಿನಗಳಲ್ಲಿ ದಿನನಿತ್ಯದ ಬಳಕೆ 47 ಮಿ. ಯೂನಿಟ್‌ಗಿಂತಲೂ ಹೆಚ್ಚಾಗಿ ಪೀಕ್ ಲೋಡ್ 2,300 ಮೆಗವಾಟ್ಸ್‌ದಾಟಿದೆ. ಅಂತಹ ದಿನಗಳಲ್ಲಿ ಮಂಡಲಿಯ ಅನಿಯಮಿತ ಲೋಡ್ ಶೆಡ್ಡಿಂಗ್‌ನ್ನು ಸಿಸ್ಟಮ್ ಕುಸಿತವನ್ನು ತಪ್ಪಿಸಲು ಮಾಡಬೇಕಾಯಿತು. ಈ ಮೇಲಿನ ಕಾರಣದಿಂದ ಕೈಗಾರಿಗಾ ಬಳಕೆದಾರರಿಗೆ ಪ್ರತಿದಿನ ಸಾಯಂಕಾಲ 6 ರಿಂದ 9 ಗಂಟೆಯವರೆಗೆ ಸೆಕ್ಯುರಿಟಿ ಲೈಟಿಂಗ್